**ಮಿಸ್ ನಂಃ 20/2024**

**ಪಿ.ಡಬ್ಲ್ಯೂಃ 1**

**ದಿನಾಂಕ 19.02.2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಎದುರುದಾರರ ಪರಃ ಶ್ರೀ ಬಿ.ಎನ್.ಬಿ. ವಕೀಲರಿಂದಃ**

1. ನಾನು ಸಾಲಿಗ್ರಾಮದ ಅಂಬೆಡ್ಕರ್ ನಗರದಲ್ಲಿ ವಾಸವಿದ್ದೇನೆ. ನನ್ನ ತಂದೆಯ ಕಾಲದಿಂದಲೂ ನಾವು ಸಾಲಿಗ್ರಾಮದ ಅಂಬೇಡ್ಕರ್ ನಗರದಲ್ಲಿ ವಾಸವಿದ್ದೇವೆ. ನಾನು 7 ನೇ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಮಾಡಿರುತ್ತೇನೆ. ನಾನು 7 ನೇ ತರಗತಿಯವರೆಗೆ ಶಾಲೆಗೆ ಹೋಗಿದ್ದು, ನನ್ನ ಎಡಗಣ್ಣು ಸಂಪೂರ್ಣವಾಗಿ ದೃಷ್ಟಿ ಕಳೆದುಕೊಂಡಿದ್ದು, ಬಲಗಣ್ಣಿನಲ್ಲಿ ಸ್ವಲ್ಪ ದೃಷ್ಠಿ ಇದ್ದ ಕಾರಣ ನನಗೆ ಶಾಲೆಯಲ್ಲಿ ಓದು ಬರಹ ಕಲಿಯಲು ಆಗಿರಲಿಲ್ಲ. 1988-89 ರಲ್ಲಿ ನಾನು ಬೆಂಗಳೂರಿನ ನ್ಯಾಶನಲ್ ಅಸೋಸಿಯೆಶನ್ ಫಾರ್ ಬ್ಲಂಡ್ ಇಲ್ಲಿ ನಾನು ಅಂಧರಿಗೆ ಇರುವ ಬ್ರೈಲ್ ಲಿಪಿಯನ್ನು ಕಲಿತಿರುತ್ತೇನೆ. ನನಗೆ ಸಹಿ ಮಾಡಲು ಬರುವುದಿಲ್ಲ ಬದಲಾಗಿ ನಾನು ನನ್ನ ಹೆಬ್ಬೆಟ್ಟನ್ನು ಹಾಕುತ್ತೇನೆ.

2. 1988-89 ರ ಸಾಲಿನಿಂದ ನಾನು ನನ್ನ ಸಹಿ ಮಾಡುತ್ತಿಲ್ಲ, ಸಹಿಯ ಬದಲಿಗೆ ನಾನು ನನ್ನ ಹೆಬ್ಬೆಟ್ಟಿನ ಗುರುತನ್ನು ಹಾಕುತ್ತೇನೆ. 1988-89 ರ ಪೂರ್ವದಲ್ಲಿ ನಾನು ಕೇವಲ ಜಗದೀಶ ಎಂದು ಮಾತ್ರ ನನ್ನ ಹೆಸರನ್ನು ಬರೆಯುತ್ತಿದ್ದೆ. ನಾನು ಒಂದು ವರ್ಷದ ಮಗು ಇದ್ದಾಗ ಬಿದ್ದ ಕಾರಣ ನನ್ನ ಕಣ್ಣುಗಳ ದೃಷ್ಠಿಯನ್ನು ನಾನು ಕಳೆದುಕೊಂಡಿರುತ್ತೇನೆ.

3. ನಾನು ಪ್ರತಿ ವಾಯಿದೆಯಲ್ಲಿಯು ಸಹ ನ್ಯಾಯಾಲಯಕ್ಕೆ ಒಬ್ಬನೇ ಬಂದು ಹೋಗುತ್ತೇನೆ. ಆದ್ದರಿಂದ ನಿಮಗೆ ಎಲ್ಲಿ ಹೋಗಬೇಕು ಎಲ್ಲಿ ಬರಬೇಕು ಎಂದು ಕಾಣುತ್ತದೆ ಎಂದರೆ ಸಾಕ್ಷಿಯು ನನಗೆ ಸ್ವಲ್ಪ ಪ್ರಮಾಣದಲ್ಲಿ ಮಾತ್ರ ದೃಷ್ಠಿ ಇದೆ ಎಂದು

ನುಡಿದಿರುತ್ತಾರೆ. ನ್ಯಾಯಾಲಯಕ್ಕೆ ಹೊರತುಪಡಿಸಿ ನನ್ನ ವೈಯಕ್ತಿಕ ಕೆಲಸಗಳಿಗೂ ಸಹ ನಾನು ಒಬ್ಬನೇ ಎಲ್ಲಾ ಕಡೆ ಹೋಗಿ ಬರುತ್ತೇನೆ ಎಂದರೆ ಸರಿ.

4. 1 ನೇ ಎದುರುದಾರರು ನನ್ನ ಹೆಸರನ್ನು ದುರುಪಯೋಗಪಡಿಸಿಕೊಂಡು ನನ್ನ ಹೆಸರಿಗೆ ಬರುತ್ತಿದ್ದ ನೋಟಿಸುಗಳನ್ನು ಹಾಗೂ ಪತ್ರಗಳನ್ನು ಪಡೆದು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ನಮ್ಮ ಮೇಲೆ ದೌರ್ಜನ್ಯ ಮಾಡಿ ನಮ್ಮ ಜಮೀನನ್ನು ಲಪಟಾಯಿಸುವ ಪ್ರಯತ್ನ ಪಟ್ಟ ಕಾರಣ ನಾನು ಈ ಅರ್ಜಿಯನ್ನು ಸಲ್ಲಿಸಿರುತ್ತೇನೆ. ನಾನು ಈ ಆರ್ಜಿಯನ್ನು 6 ಜನ ಎದುರುದಾರರ ವಿರುದ್ಧ ಹೂಡಿರುತ್ತೇನೆ.

5. 1 ನೇ ಎದುರುದಾರರು ಇದೇ ನ್ಯಾಯಾಲಯದಲ್ಲಿ ನನ್ನ ವಿರುದ್ಧ ಅಸಲು ದಾವೆ ಸಂಖ್ಯೆ 214/2021 ರ ದಾವೆಯನ್ನು ಸಲ್ಲಿಸಿದ್ದರು ಎಂದರೆ ಸರಿ. ಅಸಲು ದಾವೆ ಸಂಖ್ಯೆ 214/2021 ರ ದಾವೆಯನ್ನು ನಡೆಸಲು ನಾನು ಕೆ ಆರ್ ನಗರದ ಕೆ.ಎಸ್.ದಿಲೀಪ್ ವಕೀಲರಿಗೆ ವಕಾಲತ್ತನ್ನು ಕೊಟ್ಟಿರುವುದಿಲ್ಲ ಬದಲಾಗಿ ಸರ್ವೇ ನಂಬರ್ 303 ಮತ್ತು ಸರ್ವೇ ನಂಬರ್ 108 ರ ಜಮೀನಿನ ಸಂಬಂಧ ಉಪವಿಭಾಗಾಧಿಕಾರಿಯವರ ನ್ಯಾಯಾಲಯದಲ್ಲಿ ಪ್ರಕರಣವನ್ನು ಹೂಡಲು ಮಾತ್ರ ನಾನು ಕೆ ಆರ್ ನಗರದ ಕೆ.ಎಸ್.ದಿಲೀಪ್ ವಕೀಲರಿಗೆ ವಕಾಲತ್ತನ್ನು ಕೊಟ್ಟಿರುತ್ತೇನೆ.

**ಪಾಟೀ ಸವಾಲು ನಡೆಯುತ್ತಿದ್ದಾಗ ಎದುರುದಾರರ ಪರ ವಕೀಲರು ಪ್ರಶ್ನೆ ಕೇಳುವ ಪೂರ್ವದಲ್ಲಿಯೇ ಸಾಕ್ಷಿದಾರರು ಅಸಮಂಜಸವಾದ ಉತ್ತರಗಳನ್ನು ಕೊಡುತ್ತಿದ್ದು, ಪಾಟೀ ಸವಾಲು ನಡೆಸಲು ಸಾಕ್ಷಿದಾರರು ಸರಿಯಾಗಿ ಸಹಕರಿಸದ ಕಾರಣ ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**